



# ‘ತಾಳ್ಮೆಗಿಂತ ಮಿಗಿಲಾದುದಿಲ್ಲ’

ಯಾವುದೇ ಯಶಸ್ವಿ ಕಥೆಗಳ ಹಿಂದೆ ತಾಳ್ಮೆಯು ಮುಖ್ಯ ಪಾತ್ರವನ್ನು ವಹಿಸುತ್ತದೆ. ನಿಮ್ಮ ಪರಿಶ್ರಮದ ಜೊತೆಗೆ ಫಲ ಸಿಗುವ ತನಕ ಸ್ಥೈರಣೆಯಿಂದ ಕಾಯಬೇಕು.

■ ಸವಿತಾ ಸಚ್ಚಿದಾನಂದ

ಒಮ್ಮೆ ಲಿಯೋ ಟಾಲ್ ಸ್ಟಾಯ್ ಅವರು ಒಂದು ಕಾರ್ಯಕ್ರಮದಲ್ಲಿ ಸಭಿಕರನ್ನು ಉದ್ದೇಶಿಸಿ ಮಾತನಾಡುತ್ತ ‘ಯಾವುದೇ ಕೆಲಸದಲ್ಲಿ ಯಶಸ್ಸು ಸಿಗಬೇಕಾದರೆ ಸಹನೆ ಮತ್ತು ತಾಳ್ಮೆಯಿಂದ ಪ್ರಯತ್ನಶೀಲರಾಗಬೇಕು’ ಎಂದು ಹೇಳಿದರು. ಆಗ ಪ್ರೇಕ್ಷಕರ ಸಾಲಿನಲ್ಲಿ ಕುಳಿತ್ತಿದ್ದ ಒಬ್ಬ ಕೇಳುಗ ಟಾಲ್ ಸ್ಟಾಯ್ ಅವರಿಗೆ ‘ನಾನು ಒಬ್ಬ ವ್ಯಾಪಾರಿ, ಕೆಲವು ವರ್ಷಗಳಿಂದ ವ್ಯಾಪಾರ ಮಾಡುತ್ತಿದ್ದೇನೆ. ಆದರೆ ಹೆಚ್ಚಿನ ಲಾಭ ದೊರೆಯುತ್ತಿಲ್ಲ. ನೀವು ಹೇಳಿದಂತೆ ತಾಳ್ಮೆಯಿಂದ ಇಂದು ಒಳ್ಳೆ ವ್ಯಾಪಾರವಾಗಬಹುದು, ನಾಳೆ ಲಾಭವಾಗಬಹುದು ಎಂದು ಕಾಯುತ್ತಿದ್ದೆ. ಆದರೆ ಈಗ ನನ್ನ ಸಹನೆ ಮಿತಿ ಮೀರಿದೆ. ಆದ್ದರಿಂದ ಈ ವ್ಯಾಪಾರವನ್ನೇ ನಿಲ್ಲಿಸುವ ತೀರ್ಮಾನಕ್ಕೆ ಬಂದಿದ್ದೇನೆ’ ಎಂದ. ಆಗ ಟಾಲ್ ಸ್ಟಾಯ್ ‘ನೀನು ಕಠಿಣ ಪರಿಶ್ರಮದಿಂದ ಪ್ರಯತ್ನಪಟ್ಟು ಕೆಲಸ ಮಾಡಿದರೆ ಖಂಡಿತ ಫಲ ದೊರೆಯುತ್ತದೆ. ಅಲ್ಲಿಯವರಗೆ ಸ್ವಲ್ಪ ಕಾಯಬೇಕು’ ಎಂದರು. ಆ ವ್ಯಾಪಾರಿ, ‘ತಾಳ್ಮೆಗೂ ಒಂದು ಮಿತಿ ಇರುತ್ತದೆ. ನಿಮ್ಮ ಮಾತಿನಂತೆ ತಾಳ್ಮೆಯಿಂದ ಕೆಲಸ ಮಾಡಿದರೆ ಫಲ ದೊರೆಯುವುದಾದರೆ ನೀವು ತಾಳ್ಮೆಯಿಂದ ತೂತಿರುವ ಜರಡಿಯಲ್ಲಿ ನೀರು ತುಂಬಿಸಲು ಆಗುತ್ತದೆಯಾ?’ ಎಂದು ಪ್ರಶ್ನಿಸಿದ. ಅದಕ್ಕೆ ಟಾಲ್ ಸ್ಟಾಯ್ ನಿಶ್ಚಿತವಾಗಿಯೂ ತುಂಬಿಸಬಹುದು, ಸಹನೆಯಿಂದ ಕಾದರೆ ಚಳಿಗಾಲದಲ್ಲಿ ನೀರು ಮಂಜುಗಡ್ಡೆಯಾಗುತ್ತದೆ. ಆಗ ಜರಡಿಯಲ್ಲಿ ಖಂಡಿತ ನೀರನ್ನು ತುಂಬಿಸಬಹುದು ಎಂದರು.

ಹೀಗೆ ಯಾವುದೇ ಯಶಸ್ವಿ ಕಥೆಗಳ ಹಿಂದೆ ತಾಳ್ಮೆಯು ಮುಖ್ಯ ಪಾತ್ರವನ್ನು ವಹಿಸುತ್ತದೆ. ಅಲ್ಲಿಯವರಗೆ  ನಿಮ್ಮ ಪರಿಶ್ರಮದ ಜೊತೆಗೆ ಫಲ ಸಿಗುವ ತನಕ ಸ್ಥೈರಣೆಯಿಂದ ಕಾಯಬೇಕು. ಇಲ್ಲದಿದ್ದರೆ ಮಾಡಿದ ಪ್ರಯತ್ನವೆಲ್ಲವೂ ನೀರಿನಲ್ಲಿ ಹೋಮ ಮಾಡಿದಂತಾಗುತ್ತದೆ.

ಜನರು ಯಾವ ಕ್ಷೇತ್ರದಲ್ಲೇ ಕೆಲಸ ಮಾಡುತ್ತಿರಲಿ ಆ ಕೆಲಸದಲ್ಲಿ ಕೀರ್ತಿ, ಹಣ, ಹೆಸರು ಪಡೆಯಲೆಂದು ಓಡುತ್ತಿರುತ್ತಾರೆ. ಅವರ ಆತುರದ ವೇಗ ಎಷ್ಟಿರುತ್ತೆಂದರೆ ಮುಂದೆ ಇರುವ ಯಾವ ಅಡೆತಡೆಗಳನ್ನು ಗಮನಿಸದೆ ನುಗ್ಗುತ್ತಿರುತ್ತಾರೆ. ಈ